**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**

**ದಿಃ-15-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟಿಸವಾಲು : ಎದುರುದಾರರ ಪರ ಶ್ರೀ. ವಿ.ಆರ್.ಬಿ ವಕೀಲರಿಂದ :**

19. ಮಾಸ್ತಿ ಗೌಡರ ಅಂತ್ಯಸಂಸ್ಕಾರ ಮಾಡುವ ದಿನ ಆ ಜಾಗಕ್ಕೆ ನಾನು ಹೋಗಿ ಹಾಜರಿದ್ದೆ. ಅವರ ಅಂತಿಮ ವಿಧಿ ವಿಧಾನಗಳನ್ನು ಅವರ ಹಿರಿ ಮಗನಾದ ವಿಶ್ವನಾಥರವರೇ ಮಾಡಿದ್ದಾರೆ ಎಂದರೆ ಸರಿ. ಆ ಅಂತಿಮ ವಿಧಿ ವಿಧಾನ ಮಾಡುವ ಕಾಲದಲ್ಲಿ ನಾನು ವಿಶ್ವನಾಥ ಮತ್ತು ಅರ್ಜಿದಾರರಲ್ಲಿ ಮಾತನಾಡಿರುತ್ತೇನೆ. ಆಗ ನಾನು ಅವರಲ್ಲಿ ಅವರ ತಂದೆ ಮಾಸ್ತಿ ಗೌಡರವರು ದಾಖಲೆ ಮಾಡಿದ ಬಗ್ಗೆ ಹೇಳಿರುವುದಿಲ್ಲ.

20. ಚಿಕ್ಕಣ್ಣ ಅಲಿಯಾಸ್ ಮಾಸ್ತಿ ಗೌಡರವರಿಗೆ ತುಮಕೂರು ಮತ್ತು ಬೆಂಗಳೂರಿನಲ್ಲಿಯೂ ಸಹ ಆಸ್ತಿಗಳು ಇವೆ ಎಂದರೆ ಸರಿ. ಅವುಗಳಲ್ಲಿ ಯಾವುದು ಸ್ವಯಾರ್ಜಿತ ಮತ್ತು ಯಾವುದು ಪಿತ್ರಾರ್ಜಿತ ಎಂದು ನನಗೆ ಹೇಳಿದ್ದಾರೆ ಆದರೆ ನನಗೆ ಈಗ ಅದು ನೆನಪಿಲ್ಲ. ನನ್ನ ಪ್ರಕಾರ ನಾನು ಹೇಳುವಂತೆ ಅವರು ಸ್ವಯಾರ್ಜಿತ ಮತ್ತು ಪಿತ್ರಾರ್ಜಿತ ಸ್ವತ್ತುಗಳಿಗೆ ದಾಖಲೆ ಮಾಡಿದ್ದೇನೆ ಎಂದು ಹೇಳಿದ್ದಾರಾ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಮೊದಲನೆಯ ದಾಖಲೆಯಲ್ಲಿ ಮತ್ತು 2 ನೇ ದಾಖಲೆಯಲ್ಲಿ ಅವರು ಯಾವ ಯಾವ ಆಸ್ತಿಗಳನ್ನು ಬರೆದಿರುತ್ತಾರೆ ಎಂದು ನನಗೆ ಓದಿ ಹೇಳಿರುತ್ತಾರೆ. ಅದರಲ್ಲಿ ಎಷ್ಟು ಸ್ವಯಾರ್ಜಿತ ಆಸ್ತಿ ಮತ್ತು ಎಷ್ಟು ಪಿತ್ರಾರ್ಜಿತ ಆಸ್ತಿ ಎಂದು ನನಗೆ ಓದಿ ಹೇಳಿರುತ್ತಾರೆ.

21. 2015 ರಲ್ಲಿ ಎಲ್ಲಾ ಆಸ್ತಿಗಳ ಮೇಲೆ ಗಂಗಮ್ಮ ಮತ್ತು 3 ಹೆಣ್ಣುಮಕ್ಕಳು ಮತ್ತು 2 ಗಂಡು ಮಕ್ಕಳನ್ನು ಸೇರಿಸಿ ಜಂಟಿ ಖಾತೆ ಇರುವುದನ್ನು ನನಗೆ ಅರ್ಜಿದಾರರು ಹೇಳಿರುತ್ತಾರೆ. ಸಾಕ್ಷಿ ಮುಂದುವರಿದು ಈ ವಿಚಾರವನ್ನು ನನಗೆ ಅರ್ಜಿದಾರರು ಗಲಾಟೆಯಾದ ನಂತರ ತಿಳಿಸಿರುತ್ತಾರೆ.

22. ಮಾಸ್ತಿ ಗೌಡರು ಬೆಂಗಳೂರಿನಲ್ಲಿ ಹಾಕಿದ ಕೇಸುಗಳ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಅವರು ಹೇಳಿದ್ದರು ನನಗೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ಆ ಎಲ್ಲಾ ಕೇಸುಗಳನ್ನು ತಮ್ಮ ವಕೀಲರ ಮುಖಾಂತರವೇ ಅಭಿಯೋಜನೆ ನಡೆಸುತ್ತಿದ್ದರು ಎಂದರೆ ಸರಿ. ಆ ಕೇಸುಗಳನ್ನು ವಕೀಲರಾದ ರಂಗರಾಜು ಮತ್ತು ಲಿಂಗಪ್ಪರವರ ಮುಖಾಂತರ ನಡೆಸುತ್ತಿದ್ದರು ಎಂದರೆ ಅವರು ನನಗೆ ಈ ಬಗ್ಗೆ ಹೇಳಿರುತ್ತಾರೆ ಆದರೆ ನನಗೆ ಈಗ ಅದು ನೆನಪಿಲ್ಲ ಎಂದು ನುಡಿಯುತ್ತಾರೆ. ಅವರು ಅವರದು ಯಾವುದೇ ಕಾನೂನು ವ್ಯವಹಾರಗಳನ್ನು ಅವರ ವಕೀಲರ ಮುಖಾಂತರವೇ ಮಾಡಿಸಿಕೊಂಡು ಬರುತ್ತಿದ್ದರು ಎಂದರೆ ಅವರು ನನಗೆ ಹೇಳಿದ್ದರು ಆದರೆ ನನಗೆ ಈಗ ಅದು ನೆನಪಿಲ್ಲ ಎಂದು ನುಡಿಯುತ್ತಾರೆ.

23. ಗಂಗಮ್ಮ ಮತ್ತು ಮಾಸ್ತಿ ಗೌಡರ 3 ಹೆಣ್ಣು ಮಕ್ಕಳು ಮತ್ತು ವಿಶ್ವನಾಥರವರು ಸೇರಿ ಅರ್ಜಿದಾರರ ವಿರುದ್ಧ ಸ್ವತ್ತಿನಲ್ಲಿ ವಿಭಾಗ ಕೋರಿ ದಾವೆಯನ್ನು ಹೂಡಿದ ಬಗ್ಗೆ ಹೇಮಂತ್ ರವರು ನನಗೆ ಹೇಳಿಲ್ಲ. ಸಾಕ್ಷಿ ಮುಂದುವರಿದು ನಾನು ಸಾಕ್ಷಿದಾರನಾಗಿ ಸಹಿ ಹಾಕಿದ ದಾಖಲೆ ಮತ್ತು ಆ ಕೇಸಿನ ಬಗ್ಗೆ ಮಾತ್ರ ನನಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ.

24. ಮಾಸ್ತಿ ಗೌಡರಿಗೆ ಅರ್ಜಿ ತಪಸೀಲಿನ ಆಸ್ತಿಯು ಹೇಗೆ ಬಂತು ಎಂದು ನಾನು ಕೇಳಿದ್ದು ಅದು ಅವರ ತಂದೆಯ ಆಸ್ತಿ ಎಂದು ನನ್ನಲ್ಲಿ ಹೇಳಿರುತ್ತಾರೆ. ಮಾಸ್ತಿ ಗೌಡರ ತಂದೆಯ ಹೆಸರನ್ನು ನನಗೆ ಅವರು ಹೇಳಿದ್ದರು ಆದರೆ ನನಗೆ ಈಗ ಅದು ನೆನಪಿಲ್ಲ.

**ಪ್ರಶ್ನೆ ಃ** 2009 ರಲ್ಲಿ ಹೇಮಂತ್ ಕುಮಾರ್ ರವರು ಮದುವೆಯಾದ ವಿಚಾರ ಗೊತ್ತಿದೆಯೇ?

**ಉತ್ತರ ಃ** ಅವರು 2 ನೇ ಮದುವೆಯಾದ ಬಗ್ಗೆ ಗೊತ್ತಿರುತ್ತದೆ. ನನಗೆ ಜನರು ಹೇಳಿರುತ್ತಾರೆ. ಆದರೆ ನಾನು ಆ ಮದುವೆಗೆ ಹೋಗಿರುವುದಿಲ್ಲ.

25. ನನಗೆ ಚಿಕ್ಕಣ್ಣ ಅಲಿಯಾಸ್ ಮಾಸ್ತಿ ಗೌಡರು ಮೃತ ಪಟ್ಟ ವಿಚಾರ ಯಾರೂ ಹೇಳಿರುವುದಿಲ್ಲ ಆದರೆ ನನ್ನ ಸ್ನೇಹಿತರು ದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ. ಅವರು ನನಗೆ ನಿಸ್ತಂತು ದೂರವಾಣಿ ಮುಖಾಂತರ ಕರೆ ಮಾಡಿದ್ದರೇ ಅಥವಾ ಮನೆಯ ದೂರವಾಣಿಗೆ ಕರೆ ಮಾಡಿದ್ದರೇ ಎಂದು ನನಗೆ ಈಗ ನೆನಪಿಲ್ಲ. 2004 ರಲ್ಲಿ ನನ್ನ ಮೊಬೈಲ್ ಇತ್ತೋ ಇಲ್ಲವೋ ಎಂದು ನನಗೆ ಈಗ ನೆನಪಿಲ್ಲ. ಸ್ಥಿರ ದೂರವಾಣಿ ನನ್ನ ಮನೆಯಲ್ಲಿ ಈಗ ಇಲ್ಲ. ನನ್ನ ಮನೆಯ ಸ್ಥಿರ ದೂರವಾಣಿಯ ನಂಬರು ನನಗೆ ನೆನಪಿಲ್ಲ. ನನ್ನಲ್ಲಿ

ಯಾವ ಕಾಲಕ್ಕೂ ನಿಸ್ತಂತು ದೂರವಾಣಿಯಾಗಲೀ ಅಥವಾ ಸ್ಥಿರ ದೂರವಾಣಿಯಾಗಲೀ ಇರಲಿಲ್ಲ ಮತ್ತು ಅರ್ಜಿದಾರರ ಮಾತನ್ನು ಕೇಳಿ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

26. ನಾನು ಹೇಳುವಂತಹ 2 ನೇ ದಾಖಲೆಯನ್ನು ಮಾಡುವಂತಹ ಸಂದರ್ಭದಲ್ಲಿ ನನ್ನನ್ನು ಮಾಸ್ತಿ ಗೌಡರು ಅವರ ಕಾರ್ಖಾನೆಯ ಹತ್ತಿರ ನಾನು ಕೆಲಸ ಮಾಡುವಾಗ ಸಿಕ್ಕು 2 ನೇ ದಾಖಲೆ ಮಾಡಲಿಕ್ಕೆ ಇದೆ ಸ್ವಲ್ಪ ಆಸ್ತಿ ಬಿಟ್ಟು ಹೋಗಿರುತ್ತದೆ ನನ್ನನ್ನು ಕರೆಯಲಿಕ್ಕೆ ಇದೆ ಸ್ವಲ್ಪ ದಿನ ಬಿಟ್ಟು ಹೋಗುವ ಎಂದು ನನ್ನಲ್ಲಿ ಹೇಳಿರುತ್ತಾರೆ. ಅದು 2004 ರಲ್ಲಿ ಆ ರೀತಿಯಾಗಿ ಹೇಳಿದ್ದು ತಾರೀಖು ಮತ್ತು ತಿಂಗಳನ್ನು ನಾನು ಮರೆತಿರುತ್ತೇನೆ. ಸಾಕ್ಷಿ ಮುಂದುವರಿದು ಅದು ಫೆಬ್ರವರಿ ತಿಂಗಳಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಮಾಸ್ತಿ ಗೌಡರು ಆನಂತರ ಒಂದು ದಿನ ಸಿಕ್ಕಿ ನಾಳೆ 2 ನೇ ದಾಖಲೆಯನ್ನು ಮಾಡಲು ಹೋಗೋಣ ಮೊದಲನೇ ದಾಖಲೆಯನ್ನು ಮಾಡಲು ಹೋದ ರೀತಿ ಬಸ್ಸಿನಲ್ಲಿಯೇ ಹೋಗಿ ಮಾಡಿ ಬರೋಣ ಎಂದು ಹೇಳಿರುತ್ತಾರೆ. 2 ನೇ ದಾಖಲೆಯನ್ನು ಮಾಡಬೇಕೆಂದು ಮೊದಲೊಮ್ಮೆ ಹೇಳಿದ್ದು ಮತ್ತು ಇನ್ನೊಮ್ಮೆ ಸಹ

ಮೇಲೆ ಹೇಳಿದಂತೆ ಮಾಸ್ತಿ ಗೌಡರು ನನ್ನಲ್ಲಿ ಹೇಳಿದ್ದರು ಮತ್ತು ಬಸ್ಸಿನಲ್ಲಿ ಹೋಗಿ ಬರೋಣ ಎಂಬುದನ್ನು ಸಹ ಹೇಳಿದ್ದರು ಎಂದು ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ತಿಳಿಸಿದ ನೆನಪಿದೆ.

27. ಮಾಸ್ತಿ ಗೌಡರು ನಾನು ಹೇಳಿದಂತಹ ಮೊದಲನೇ ದಾಖಲೆಯನ್ನು ರದ್ದು ಪಡಿಸಿದರೆ ಎಂಬ ಪ್ರಶ್ನೆಗೆ ಸಾಕ್ಷಿಯು ಅವರು ಅದನ್ನು ರದ್ದು ಪಡಿಸಿರುವುದಿಲ್ಲ ಆದರೆ 2 ನೇ ದಾಖಲೆಯನ್ನು ಬರೆಯುವಾಗ ಮೊದಲ ದಾಖಲೆಯಲ್ಲಿ ಬರೆದ ಸ್ವತ್ತುಗಳು ಬಿಟ್ಟುಹೋಗಿದೆ ಅದನ್ನು ಬರೆಯಬೇಕೆಂದು ಹೇಳಿಸಿ ದಸ್ತಾವೇಜು ಬರಹಗಾರರಲ್ಲಿ ಬರೆಸಿರುತ್ತಾರೆ. ದಸ್ತಾವೇಜು ಬರಹಗಾರರು ಮೊದಲಿನ ದಾಖಲೆಯನ್ನು ತಾನು ರದ್ದುಪಡಿಸುವುದಿಲ್ಲವೆಂದು 2 ನೇ ದಾಖಲೆಯನ್ನು ಮಾಡುವಾಗ ನೀವು ಮೊದಲನೆಯ ದಾಖಲೆಯಲ್ಲಿದ ವಿಷಯವನ್ನು ಹೇಳುತ್ತಾ ಹೋಗಿ ಮತ್ತು ಮೊದಲ ದಾಖಲೆಯಲ್ಲಿ ಬಿಟ್ಟು ಹೋದ ಸ್ವತ್ತುಗಳನ್ನು ಸಹ ನೀವು ಹೇಳುತ್ತಾ ಹೋಗಿ ನಾನು ಬರೆಯುತ್ತಾ ಹೋಗುತ್ತೇನೆ ಎಂದು ಮಾಸ್ತಿ ಗೌಡರಲ್ಲಿ ದಸ್ತಾವೇಜು ಬರಹಗಾರರು ತಿಳಿಸಿರುತ್ತಾರೆ. ನಾನು ಹೇಳುವಂತಹ 2 ನೇ ದಾಖಲೆಯನ್ನು ಬರೆಸುವಾಗ ಅದು ಪಿತ್ರಾರ್ಜಿತ

ಆಸ್ತಿಯೇ ಅಥವಾ ಸ್ವಯಾರ್ಜಿತ ಆಸ್ತಿಯೇ ಎಂಬ ಬಗ್ಗೆ ದಸ್ತಾವೇಜು ಬರಹಗಾರರಲ್ಲಿ ತಿಳಿಸಿರುತ್ತಾರೆ ಆದರೆ ಆ ಬಗ್ಗೆ ನನಗೀಗ ನೆನಪಿಲ್ಲ. ಆ ದಾಖಲೆಯಲ್ಲಿ ಸ್ವಯಾರ್ಜಿತ ಅಥವಾ ಪಿತ್ರಾರ್ಜಿತ ಆಸ್ತಿಯೆಂದು ಬರೆದ ಬಗ್ಗೆ ನನಗೀಗ ನೆನಪಿಲ್ಲ.

28. ಎರಡೂ ದಾಖಲೆಗಳಲ್ಲಿ ದಾಖಲೆಗಳನ್ನು ಬರೆದ ದಿನಾಂಕ, ಸ್ಥಳ ಮತ್ತು ಸಮಯವನ್ನು ಬರೆದಿರುತ್ತಾರೆ. ಸಾಕ್ಷಿ ಮುಂದುವರಿದು ಸ್ಥಳ ಬರೆದಿರುವುದಿಲ್ಲ ದಿನಾಂಕ ಮಾತ್ರ ಬರೆದಿರುತ್ತಾರೆ ಎಂದು ನುಡಿಯತ್ತಾರೆ. ಸಮಯ ಬರೆದಿರುವುದಿಲ್ಲ ಎಂದು ನುಡಿಯುತ್ತಾರೆ. ದಸ್ತಾವೇಜು ಬರಹಗಾರರು ತಮ್ಮ ನೊಂದಣಿ ಸಂಖ್ಯೆ ಮತ್ತು ಮೊಹರು ಆ ದಾಖಲೆಗಳಲ್ಲಿ ಹಾಕಿರುವುದಿಲ್ಲ. ದಸ್ತಾವೇಜು ಬರಹಗಾರರ ಹೆಸರು ಮತ್ತು ವಿಳಾಸ ನನಗೆ ನೆನಪಿಲ್ಲ. ಆದರೆ ಮಾಸ್ತಿ ಗೌಡರು ಅವರ ಹೆಸರನ್ನು ನನ್ನಲ್ಲಿ ಹೇಳಿದ್ದರು. ಅವರ ಹೆಸರನ್ನು ಆ 2 ದಾಖಲೆಗಳಲ್ಲಿ ಬರೆದ ಬಗ್ಗೆ ನನಗೆ ಈಗ ನೆನಪಿಲ್ಲ.

29. ಜನವರಿ 2004 ರಲ್ಲಿ ಒಂದು ದಾಖಲೆ ಮತ್ತು ಫೆಬ್ರವರಿ 2004 ರಲ್ಲಿ ಇನ್ನೊಂದು ದಾಖಲೆಯನ್ನು ನಾನು ನೋಡಿರುತ್ತೇನೆ ಆನಂತರ ಚಿಕ್ಕರಾಮಯ್ಯನವರು ತಂದು ತೋರಿಸಿದಾಗ ನೋಡಿರುತ್ತೇನೆ ಆನಂತರ ಈವರೆಗೂ ಆ ದಾಖಲೆಗಳನ್ನು ನಾನು

ನೋಡಿರುವುದಿಲ್ಲ. ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ತಯಾರಿಸುವಾಗ ನಾನು ಆ ದಾಖಲೆಯನ್ನು ನೋಡಿರುತ್ತೇನೆ ಮತ್ತು ಅದನ್ನು ನನಗೆ ತೋರಿಸಿರುತ್ತಾರೆ. ಅದು ಯಾವಾಗ ಎಂದು ಕೇಳಿದಾಗ ಚಿಕ್ಕರಾಮಯ್ಯನವರು ಸಣಬದಲ್ಲಿ ಅರ್ಜಿದಾರರಿಗೆ ತಂದು ಕೊಟ್ಟು ತೋರಿಸಿದಾಗ ನಾನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಅದನ್ನು ವಕೀಲರ ಕಚೇರಿಯಲ್ಲಿ ಯಾವತ್ತೂ ನೋಡಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನಾನು ವಕೀಲರ ಕಚೇರಿಯಲ್ಲಿ ತಯಾರಿಸುವಾಗ ನನಗೆ ಚಿಕ್ಕರಾಮಯ್ಯನವರು ದಾಖಲೆಯನ್ನು ತೋರಿಸಿ ನಾನು ನೋಡಿದ ನೆನಪಿನ ಆಧಾರದ ಮೇಲೆ ಪ್ರಮಾಣ ಪತ್ರವನ್ನು ತಯಾರಿಸಿರುತ್ತೇನೆ.

**<u>ಪ್ರಶ್ನೆ ಃ</u>** ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಸಪ್ಲಿಮೆಂಟರಿ ವಿಲ್ ಬಗ್ಗೆ ಬರೆಸಿದ್ದೇನೆಯೇ?

**<u>ಉತ್ತರ ಃ</u>** ಸಪ್ಲಿಮೆಂಟರಿ ವಿಲ್ ಎಂದರೆ ಏನು ಎಂದು ನನಗೆ ಗೊತ್ತಿಲ್ಲ. ಆದರೆ 2 ನೇ ವಿಲ್ ಬಗ್ಗೆ ನನಗೆ ಗೊತ್ತಿದೆ.

30. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಕೊಡಿಸಿಲ್ ಬಗ್ಗೆ ಬರೆಸಿರುತ್ತೇನೆ ಆದರೆ ಆ ಬಗ್ಗೆ ನನಗೆ ಈಗ ನೆನಪಿಲ್ಲ. ಕೊಡಿಸಿಲ್ ಎಂದರೆ ಅದು ನೋಟರಿ ಎಂದು ನಾನು ಅಂದುಕೊಂಡಿರುತ್ತೇನೆ. ನಾನು ಹೇಳುವಂತಹ 2 ನೇ ದಾಖಲೆಯಲ್ಲಿ

ಸಪ್ಲಿಮೆಂಟರಿ ವಿಲ್ ಮತ್ತು ಕೊಡಿಸಿಲ್ ಎಂದು ಬರೆದಿದ್ದಾರೋ ಇಲ್ಲವೋ ಎಂದು ನನಗೆ ಈಗ ನೆನಪಿಲ್ಲ. ಆದರೆ ನನಗೆ ಓದಿ ಹೇಳಿದ್ದರು. ಓದಿ ಹೇಳುವಾಗ ಸಪ್ಲಿಮೆಂಟರಿ ವಿಲ್ ಮತ್ತು ಕೊಡಿಸಿಲ್ ಎಂದು ಓದಿ ಹೇಳಿದ್ದಾರೋ ಇಲ್ಲವೋ ನನಗೆ ಈಗ ನೆನಪಿಲ್ಲ. ನಾನು ಹೇಳುವಂತಹ ದಾಖಲೆಯನ್ನು ತೋರಿಸಿದರೆ ಅದರಲ್ಲಿ ಸಪ್ಲಿಮೆಂಟರಿ ವಿಲ್ ಮತ್ತು ಕೊಡಿಸಿಲ್ ಎಂದು ಬರೆದಿದೆಯೋ ಇಲ್ಲವೋ ಎಂದು ಹೇಳಬಹುದೇ ಎಂದು ಕೇಳಿದಾಗ ಸಾಕ್ಷಿಯು ಅದು ಕನ್ನಡದಲ್ಲಿ ಬರೆದಿದ್ದರೆ ಹೇಳಬಹುದು ಎಂದು ನುಡಿಯುತ್ತಾರೆ. ನಾನು ಹೇಳುವಂತಹ ದಾಖಲೆಗಳನ್ನು ಕನ್ನಡದಲ್ಲಿ ಬರೆದಿದ್ದರು. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ತಯಾರಿಸುವ ಸಂದರ್ಭದಲ್ಲಿ ಮರಣ ಶಾಸನದ ಆಧಾರದ ಮೇಲೆ ಸಪ್ಲಿಮೆಂಟರಿ ವಿಲ್ ಮತ್ತು ಕೊಡಿಸಿಲ್ ಬಗ್ಗೆ ಬರೆಸಿರುತ್ತೇನೆ.

31. ನಿ.ಪಿ.2 ನ್ನು ಸಾಕ್ಷಿಗೆ ತೋರಿಸಿ ಈ ದಾಖಲೆಯಲ್ಲಿ ಸಪ್ಲಿಮೆಂಟರಿ ವಿಲ್, ಕೊಡಿಸಿಲ್ ಬಗ್ಗೆ ಬರೆದಿದೆಯೇ ಎಂದು ಕೇಳಿದಾಗ ಸಾಕ್ಷಿಯು ಆ ದಾಖಲೆಯನ್ನು ಪಡೆದು ನ್ಯಾಯಾಲಯದ ಸಮಕ್ಷಮ ಚಾಲೀಸನ್ನು ಧರಿಸಿ ಅದನ್ನು ಓದುತ್ತಿರುತ್ತಾರೆ. ಸಾಕ್ಷಿಯು ಅದನ್ನು ಪರಿಶೀಲಿಸಿ ಕ್ರಮವಾಗಿ ಓದಿ ನೋಡಿ ಸಪ್ಲಿಮೆಂಟರಿ ವಿಲ್

ಮತ್ತು ಕೊಡಿಸಿಲ್ ಎಂಬ ಪದಗಳು ಅದರಲ್ಲಿ ಬರೆದಿಲ್ಲ ಎಂದು ನುಡಿಯುತ್ತಾರೆ.

32. ನಿ.ಪಿ.2 ನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ಬೆಂಗಳೂರು ವಿಳಾಸವನ್ನು ನೀಡಿ ಇಂದು ತಾನು ತುಮಕೂರಿನಲ್ಲಿ ಈ ದಾಖಲೆ ಬರೆಸುತ್ತಿದ್ದೇನೆ ಎಂದು ಉಲ್ಲೇಖ ಇದೆಯೇ ಎಂದು ಕೇಳಲಾಗಿ ಸಾಕ್ಷಿಯು ಆ ದಾಖಲೆಯನ್ನು ಪಡೆದು ನ್ಯಾಯಾಲಯದ ಸಮಕ್ಷಮ ಚಾಲೀಸನ್ನು ಧರಿಸಿ ಅದನ್ನು ಕ್ರಮವಾಗಿ ಓದಿ ನೋಡಿ ಅದರಲ್ಲಿ ಅವರ ಮನೆಯ ಬೆಂಗಳೂರಿನ ವಿಳಾಸವಿದ್ದು ತುಮಕೂರಿನಲ್ಲಿ ಅದನ್ನು ಬರೆಸಿದ ಬಗ್ಗೆ ನಮೂದು ಇಲ್ಲ ಎಂದು ಸ್ಪಷ್ಟವಾಗಿ ನುಡಿಯುತ್ತಾರೆ.

33. ನಿ.ಪಿ.1 ಮತ್ತು 2 ನ್ನು ಸಾಕ್ಷಿಗೆ ನೀಡಿ ಈ ಎರಡೂ ದಾಖಲೆಗಳಲ್ಲಿ ನಾನು ತುಮಕೂರಿನಲ್ಲಿ ಸಹಿ ಹಾಕಿದ್ದೇನೆ ಎಂದು ಸಹಿ ಮಾಡಿದ ಸ್ಥಳದಲ್ಲಿ ಬರೆದಿಲ್ಲ ಎಂದರೆ ಸಾಕ್ಷಿಯು ಆ ದಾಖಲೆಗಳನ್ನು ಪಡೆದು ನ್ಯಾಯಾಲಯದ ಸಮಕ್ಷಮ ಚಾಲೀಸನ್ನು ಧರಿಸಿ ಅದನ್ನು ಕ್ರಮವಾಗಿ ಓದಿ ನೋಡಿ ಆ ರೀತಿ ಬರೆದಿಲ್ಲ ಎಂದು ಸ್ಪಷ್ಟವಾಗಿ ನುಡಿಯುತ್ತಾರೆ.

34. ನಿ.ಪಿ.1 ಮತ್ತು 2 ನೇ ಪುನಃ ಸಾಕ್ಷಿಗೆ ತೋರಿಸಿ ಅವುಗಳ ಕೊನೆಯ ಪುಟಗಳಲ್ಲಿ ಎಲ್ಲಿ ತಯಾರಿಸಲಾಗಿದೆ, ಯಾವ

ದಿನಾಂಕದಂದು ತಯಾರಿಸಲಾಗಿದೆ ಮತ್ತು ಯಾವ ಸಮಯದಲ್ಲಿ ತಯಾರಿಸಲಾಗಿದೆ ಎಂದು ಬರೆದಿದೆಯೇ ಎಂದು ಕೇಳಲಾಗಿ ಸಾಕ್ಷಿಯು ಆ ದಾಖಲೆಗಳನ್ನು ಪಡೆದು ನ್ಯಾಯಾಲಯದ ಸಮಕ್ಷಮ ಚಾಲೀಸನ್ನು ಧರಿಸಿ ಅದನ್ನು ಕ್ರಮವಾಗಿ ಓದಿ ನೋಡಿ ಅದರಲ್ಲಿ ತುಮಕೂರು ಎಂದು ಕೆಳಗಡೆ ಬರೆದಿರುತ್ತದೆ ಎಂದು ತೋರಿಸಿ ನುಡಿದಿರುತ್ತಾರೆ.

35. ಬಿಕ್ಲಂ ಎಂದು ಬರೆದಲ್ಲಿ ಅವರ ಹೆಸರು, ಮೊಹರು, ದಿನಾಂಕ ಇಲ್ಲ ಎಂದರೆ ಸಾಕ್ಷಿಯು ಬರೆದಿಲ್ಲ ಆದರೆ ಅದರಲ್ಲಿ ಸಿಬಿಸಿ ಎಂದು ಸಹಿ ಹಾಕಿರುತ್ತಾರೆ ಎಂದು ನುಡಿದಿರುತ್ತಾರೆ. ಸಿಬಿಸಿ ಎಂದರೆ ಯಾರ ಸಹಿ ಎಂದು ನನಗೆ ಗೊತ್ತಿದೆ ಆದರೆ ಅವರ ಹೆಸರು ನನಗೆ ಈಗ ನೆನಪಿಲ್ಲ.

36. ನಿ.ಪಿ.1 ಮತ್ತು 2 ದಾಖಲೆಗಳಿಗೆ ಮಾಸ್ತಿ ಗೌಡರು ಒಟ್ಟು ಎಷ್ಟು ಸಹಿ ಹಾಕಿದ್ದಾರೆ ಎಂದು ನನಗೆ ಈಗ ನೆನಪಿಲ್ಲ. ಸಾಕ್ಷಿ ಮುಂದುವರಿದು ಅವುಗಳಲ್ಲಿ ತುಂಬಾ ಪುಟಗಳಿದ್ದು ಎಲ್ಲಾ ಪುಟಗಳಿಗೂ ಸಹಿ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ನಿ,ಪಿ.1 ಮತ್ತು 2 ಎಷ್ಟೆಷ್ಟು ಪುಟಗಳ ದಾಖಲೆಗಳು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ನನಗೆ ಈಗ ನೆನಪಾಗವುದಿಲ್ಲ ಎಂದು ನುಡಿಯುತ್ತಾರೆ.

37. ನಾನು ಹೇಳುವಂತಹ 2 ನೇ ದಾಖಲೆಯನ್ನು ಬರೆಯುವಾಗ ಮಾಸ್ತಿ ಗೌಡರು ಯಾವುದೇ ಪೇಪರನ್ನು ತೆಗೆದುಕೊಂಡು ಹೋಗಿರುವುದಿಲ್ಲ. ಸಾಕ್ಷಿ ಮುಂದುವರಿದು ಅವರು ಒಂದು ಚೀಟಿಯಲ್ಲಿ ಬಿಟ್ಟು ಹೋದ ಸ್ವತ್ತುಗಳ ಬಗ್ಗೆ ಬರೆದುಕೊಂಡು ಬಂದಿದ್ದರು ಅವರು ಹೇಳುತ್ತಾ ಹೋದಂತೆ ದಸ್ತಾವೇಜು ಬರಹಗಾರರು ಬರೆಯುತ್ತಾ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಮಾಸ್ತಿ ಗೌಡರಿಗೆ ಈ ಆಸ್ತಿಗಳು ಹೇಗೆ ಬಂತು ಎಂದು 2 ನೇ ದಾಖಲೆಯಲ್ಲಿ ಹೇಳಿರುತ್ತಾರೆ ಆದರೆ ಈಗ ನನಗೆ ನೆನಪಿಲ್ಲ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**